ಬಹುಶಃ ಕಾಗೆ ಒಯ್ದಿರಬಹುದೆಂದಳು. ತಿಂಗಳ ಅನಂತರ ಪುಟ್ಟಮ್ಮನ ನಾಲ್ಕು ವರ್ಷದ ಮಗ ಬಟ್ಟಲೊಂದರಲ್ಲಿದ್ದ ಉಪ್ಪಿಟ್ಟನ್ನು ಚಮಚದಲ್ಲಿ ತಿನ್ನುವಾಗ ನೋಡಿದರೆ, ಅದು ನಮ್ಮ ಮನೆಯದೇ ಬಟ್ಟಲು ಮತ್ತು ಚಮಚ! 'ಇವು ನಮ್ಮನೆಯದರಂತೆ ಕಾಣ್ತಿವೆ' ಅಂತ ಅಮ್ಮ ಅಂದಾಗ ಪುಟ್ಟಮ್ಮ ಏನೂ ಹೇಳದೆ ಮುಖ ತಪ್ಪಿಸಿಕೊಂಡಳು. ಆಕೆ ಕಾಗೆಯ ಮೇಲೆ ಅಪವಾದ ಹೊರಿಸಿಬಿಟ್ಟಿದ್ದಳು. ಅನಂತರದ ದಿನಗಳಲ್ಲಿ ಮನೆಯ ಹಿರಿಯರು ಜಾಗೃತರಾದರೆನ್ನಿ.

ಬರೀ ಚಮಚ, ಬಟ್ಟಲುಗಳನ್ನಷ್ಟೇ ಅಲ್ಲ ಕಾಗೆ ಕೊಂಡೊಯ್ಯುವುದು. ಒಣಹಾಕಲು ಇಟ್ಟ ಹಪ್ಪಳ–ಸಂಡಿಗೆ, ಕೆಂಪುಮೆಣಸಿನಕಾಯಿಗಳನ್ನೂ ಅವು ಎತ್ತಿಕೊಂಡು ಹೋಗುತ್ತಿದ್ದವು. ಬೇಸಿಗೆಯಲ್ಲಿ ತೋಟದ ಕೆಲಸದವರು ಆರಿಸಿ ತಂದುಕೊಟ್ಟ ಹಲಸಿನಕಾಯಿ, ಬಾಳೆಕಾಯಿಗಳನ್ನು ಬಿಡಿಸಿ, ಬೇಯಿಸಿ, ಅದಕ್ಕೆ ಉಪ್ಪು, ಜೀರಿಗೆಮೆಣಸು ಸೇರಿಸಿ ಒರಳಿನಲ್ಲಿ ರುಬ್ಬಿ ಹಪ್ಪಳದ ಹಿಟ್ಟನ್ನು ತಯಾರುಮಾಡಲಾಗುತ್ತಿತ್ತು. ಮನೆಮಂದಿಯೆಲ್ಲಾ ಕೂತು ಕಷ್ಟಪಟ್ಟು ಹಲಸಿನಕಾಯಿ / ಬಾಳೆಕಾಯಿ ಹಪ್ಪಳ, ಸೀಮೆಅಕ್ಕಿ / ಅರಳಿನ ಸಂಡಿಗೆ ಮಾಡಿ ಅಂಗಳದಲ್ಲಿ ಒಣಹಾಕುತ್ತಿದ್ದರು. ಹಪ್ಪಳ ಒತ್ತುವ ಮೊದಲೇ ಹದವಾಗಿ ಉಪ್ಪು–ಖಾರ ಬೆರೆತು ರುಚಿರುಚಿಯಾಗಿರುತ್ತಿದ್ದ ಒಂದಿಷ್ಟು ಹಸಿಹಿಟ್ಟನ್ನು ಚಿಕ್ಕವರಾದ ನಾವು 'ಗುಳುಂಕರಿಸಿ' ಆಗಿರುತ್ತಿತ್ತು. ಇನ್ನು ಅವನ್ನೆಲ್ಲಾ ಬಿಸಿಲಿಗೆ ಒಣಹಾಕಿದ ಮೇಲೆ ಒಂದು ಕೋಲನ್ನು ಹಿಡಿದು ಕಾಗೆಗಳು ಬರದಂತೆ ಕಾಯುವ ಕೆಲಸ ನಮ್ಮಂತಹ ಸಣ್ಣ ಮಕ್ಕಳ ಪಾಲಿಗೆ ಬರುತ್ತಿತ್ತು. ಗಡಿ ಕಾಯುವ ಸೈನಿಕರಂತೆ ನಾವೂ ಕುಳಿತುಕೊಳ್ಳುತ್ತಿದ್ದೆವು. ಒಂದು ಕೈಯಲ್ಲಿ ಖಡ್ಗದಂತೆ ಕೋಲು, ಇನ್ನೊಂದು ಕೈಯಲ್ಲಿ ಗುರಾಣಿಯಂತೆ ಕಥೆಪುಸ್ತಕ ಹಿಡಿದು ಕೂರುತ್ತಿದ್ದ ನಮಗೆ ಬಿಸಿಲೇರುತ್ತಾ ಬಂದಂತೆ ಹಸಿವು ಹೆಚ್ಚಾಗಿ, ಅರ್ಧರ್ಧ ಒಣಗಿದ್ದ ಹಪ್ಪಳಗಳನ್ನೇ ತೆಗೆದು ತಿಂದುಬಿಡುತ್ತಿದ್ದೆವು. ಅದೂ ಕೂಡ ದೊಡ್ಡವರಿಗೆ ಗೊತ್ತಾಗಬಾರದೆಂದು ಅಲ್ಲಿಂದ ಒಂದು, ಇಲ್ಲಿಂದ ಒಂದು ತೆಗೆದು ಹೊಟ್ಟೆಗೆ ಸೇರಿಸಿಬಿಡುತ್ತಿದ್ದೆವು. ಅಮ್ಮನೋ, ದೊಡ್ಡಮ್ಮನೋ ಕೇಳಿದರೆ ಕಾಗೆ ಬಂದು ಎತ್ತಿಕೊಂಡು ಹೋಯಿತು ಎನ್ನುತ್ತಿದ್ದೆವು. 'ನಿಮ್ಮನ್ನು ಕಾವಲು ಕೂರಿಸಿದ್ದು ದಂಡಕ್ಕೆ' ಅಂತ ಒಂದಿಷ್ಟು ಬೈದು

